**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ**
**ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ -3500/2021**
**ಚಾಸಾ - 02 / ಪ್ರಾಸಾ - 01**

| | |
|---|---|
| ಹೆಸರು | **ಭವ್ಯ** |
| ಗಂಡನ ಹೆಸರು | **ಕುಮಾರ್** |
| ವಯಸ್ಸು | **33** |
| ಉದ್ಯೋಗ | **ವ್ಯವಸಾಯ** |
| ವಿಳಾಸ | **ಮೋಟಗಾನಹಳ್ಳಿ** |

**ದಿನಾಂಕಃ 27-06-2024 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ಚಾಸಾ-1 ರವರು ನನ್ನ ಅತ್ತಿಗೆ. ಸುಮಾರು ಒಂದು ವರ್ಷದ ಹಿಂದೆ ಜಮೀನು ವಿಷಯಕ್ಕೆ ಸಂಬಂಧಿಸಿದಂತೆ ಜಗಳ ಆಗಿತ್ತು. ಆರೋಪಿಗಳು ಬೈದಾಡಿದರು. ಆರೋಪಿಗಳು ನನಗೆ ಮತ್ತು ಚಾಸಾ-1 ರವರಿಗೆ ಹೊಡೆದು ಮನೆಯನ್ನು ಬಿಡಿ ಎಂದು ಜಗಳ ಮಾಡಿದರು. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಚಾಸಾ-1 ರವರು ಪೋಲೀಸ್ ಠಾಣೆಯಲ್ಲಿ ದೂರನ್ನು ನೀಡಿದರು. ನಂತರ ಪೋಲೀಸರು ನಮ್ಮ ಮನೆಯ ಹತ್ತಿರ ಬಂದು ಮಹಜರ್ ನ್ನು ಮಾಡಿದರು.

ಈಗ ಸಾಕ್ಷಿಗೆ ಪಂಚನಾಮೆಯನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಪಂಚನಾಮೆಯನ್ನು ನಿಪಿ-1 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಪಂಚನಾಮೆಯನ್ನು ಮಾಡುವ ಸಮಯದಲ್ಲಿ ಪೋಲೀಸರು ಯಾವುದೇ ವಸ್ತುಗಳನ್ನು ವಶಪಡಿಸಿಕೊಳ್ಳಲಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಪೋಲೀಸರಿಗೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ.

ನಾನು ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಇಂದು ನ್ಯಾಯಾಲಯದ ಮುಂದೆ ಆರೋಪಿಗಳು ಹಾಜರಿದ್ದಾರೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ದಿ.02-07-2021 ರಂದು ಚಾಸಾ-1 ರವರು ನಿಮ್ಮ ಗ್ರಾಮಕ್ಕೆ ಬಂದಿದ್ದರು ಮತ್ತು ಸಂಜೆ 4.30 ರ ಸಮಯದಲ್ಲಿ ನಿಮ್ಮ ಮನೆಯ ಮುಂದೆ ನಿಂತಿದ್ದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಆ ಸಮಯದಲ್ಲಿ ಚಾಸಾ-1 ರವರು 1 ನೇ ಆರೋಪಿಗೆ ಏಕೆ ಚಾಸಾ-3 ಮತ್ತು ಪ್ರಾಸಾ-1 ರವರ ಮೇಲೆ ಗಲಾಟೆ ಮಾಡುತ್ತಿರಾ ಎಂದು ಕೇಳಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಆಗ ಆರೋಪಿಗಳು ಚಾಸಾ-1 ರವರ ಜೊತೆ ಜಗಳವನ್ನು ಮಾಡಿ ಅವಾಚ್ಯ ಶಬ್ದಗಳಿಂದ ಬೈದು ನಮ್ಮ ವಿಚಾರಕ್ಕೆ ಬಂದಲ್ಲಿ ನಿನ್ನನ್ನು ಕೊಲೆ ಮಾಡುತ್ತೇನೆ ಎಂದು ಪ್ರಾಣ ಬೆದರಿಕೆ ಹಾಕಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. 1 ನೇ ಆರೋಪಿಯು ಅಲ್ಲೆ ಬಿದ್ದಿದ್ದ ದೊಣ್ಣೆಯಿಂದ ಚಾಸಾ-1 ರವರ ಕೈ ಮೇಲೆ ಹೊಡೆದು ನೋವುಂಟು ಮಾಡಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಜಗಳವನ್ನು ಬಿಡಿಸಲು ಹೋದ ನಿಮ್ಮ ತಂದೆಯಾಗಿ ಚಾಸಾ-3 ರವರಿಗೂ ಬೈದು ಗಲಾಟೆ ಮಾಡಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಂತರ 1 ನೇ ಆರೋಪಿಯು ನಿಮ್ಮ ಬಟ್ಟೆಯನ್ನು ಹಿಡಿದು ಎಳೆದಾಡಿ ಅವಮಾನ ಪಡಿಸಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಆ ಸಮಯದಲ್ಲಿ ಚಾಸಾ-4 ಮತ್ತು 5 ರವರು ಬಂದು ಜಗಳವನ್ನು ಬಿಡಿಸಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಈ ಮೇಲೆ ಹೇಳಿರುವ ವಿಷಯಕ್ಕೆ ಸಂಬಂಧಿಸಿದಂತೆ ಚಾಸಾ-

1 ರವರು ತಾವರಕೆರೆ ಪೋ. ಠಾಣೆಗೆ ದೂರನ್ನು ನೀಡಿದರು ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ.

ದಿ.05-07-2021 ರಂದು ಪೋಲೀಸರು ನಿಮಗೆ ಮತ್ತು ಚಾಸಾ5 ಮತ್ತು 6 ರವರಿಗೆ ಪಂಚನಾಮೆಗೆ ಸಹಕರಿಸುವಂತೆ ಹೇಳಿ ನೋಟಿಸ್ ನ್ನು ನೀಡಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಈಗ ಸಾಕ್ಷಿಗೆ ನೋಟಿಸ್ ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ನೋಟಿಸ್ ನ್ನು ನಿಪಿ-2 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಅದೇ ದಿನದಂದು ಬೆಳಗ್ಗೆ 10 ರಿಂದ 10.45 ರ ಸಮಯದಲ್ಲಿ ಪೋಲೀಸರು ಕೃತ್ಯ ನಡೆದ ಸ್ಥಳಕ್ಕೆ ಬಂದು ಕೃತ್ಯ ನಡೆದ ಸ್ಥಳದಲಿಲ ನಿಪಿ-1 ರಂತೆ ಪಂಚನಾಮೆಯನ್ನು ನಿಮ್ಮ, ಚಾಸಾ-5 ಮತ್ತು 6 ರವರ ಸಮಕ್ಷಮದಲ್ಲಿ ಮಾಡಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಈಗ ಸಾಕ್ಷಿಗೆ ಒಂದು ದೊಣ್ಣೆಯನ್ನು ತೋರಿಸಿದ್ದು, ಅದನ್ನು ಪಂಚನಾಮೆ ಮಾಡುವ ಸಮಯದಲ್ಲಿ ಪೋಲೀಸರು ವಶಪಡಿಸಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ದೊಣ್ಣೆಯನ್ನು ಮುದ್ದೆ ಮಾಲು-1 ಎಂದು ಗುರುತಿಸಲಾಯಿತು. ದಿ.29-07-2021 ರಂದು ನೀವು ಕಲಂ.164 ಸಿ. ಆರ್. ಪಿ.ಸಿ ರೀತ್ಯ ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ದಂಡಾಧಿಕಾರಿಗಳಿಗೆ ನಿಮ್ಮ ಹೇಳಿಕೆಯನ್ನು ನೀಡಿರುತ್ತಿರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ಪ್ರಕರಣ ನಡೆದು ಸುಮಾರು 3 ವರ್ಷಗಳು ಆಗಿರುವ ಕಾರಣ ನೀವು ದಿನಾಂಕ ಮತ್ತು ಸಮಯವನ್ನು ಹೇಳಲು ಮರೆತಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

**ಪಾಟೀ ಸವಾಲುಃ- ಆರೋಪಿಗಳ ಪರ ಶ್ರೀ. ವಿ. ಎಸ್ , ವಕೀಲರಿಂದಃ-**

1 ನೇ ಆರೋಪಿಯು ನಿಮ್ಮ ಚಿಕ್ಕಪ್ಪನ ಮಗ ಮತ್ತು 2 ನೇ ಆರೋಪಿಯು ಅವರ ಹೆಂಡತಿ ಆಗಿರುವ ಕಾರಣ ಅವರಿಬ್ಬರು ನಿಮ್ಮ ಅಣ್ಣ ಅತ್ತಿಗೆ ಎಂದರೆ ಸಾಕ್ಷಿ

ಹೌದು ಎನ್ನುತ್ತಾರೆ. ಚಾಸಾ-1 ರವರು ಬೆಂಗಳೂರಿನ ರಾಜಾಜಿ ನಗರದಲ್ಲಿ ವಾಸಿಸುತ್ತಿದ್ದಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಹಬ್ಬ ಮತ್ತು ಇತರೇ ಸಮಾರಂಭಗಳಲ್ಲಿ ಮಾತ್ರ ಚಾಸಾ-1 ರವರು ನಿಮ್ಮೂರಿಗೆ ಬರುತ್ತಾರೆ ಎಂದರೆ ಸಾಕ್ಷಿಯ ಹೌದು ಎನ್ನುತ್ತಾರೆ. ಚಾಸಾ-1 ಮತ್ತು ಆರೋಪಿಗಳ ನಡುವೆ ಮೊದಲಿನಿಂದಲೂ ಸಣ್ಣ ಸಣ್ಣ ವಿಚಾರಕ್ಕೆ ಜಗಳ ನಡೆಯುತ್ತಿದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಚಾಸಾ-1 ರವರು ಆಗಾಗ ಆರೋಪಿಗಳ ಜೊತೆಯಲ್ಲಿ ಜಗಳ ತೆಗೆದು ಪೋ. ಠಾಣೆಗೆ ದೂರನ್ನು ನೀಡುತ್ತಾರೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ದಿ.02-07-2021 ರಂದು ಯಾವುದೇ ಗಲಾಟೆಯು ನಡೆಯದೇ ಇದ್ದರೂ ಸಹ ದಿ.04-07-2021 ರಂದು ಚಾಸಾ-1 ರವರು ಆರೋಪಿಗಳಿಗೆ ಬುದ್ದಿ ಕಲಿಸುತ್ತೇನೆ ಎಂದು ಹೇಳಿ ಸುಳ್ಳು ದೂರನ್ನು ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ.

ದಿ.02-07-2021 ರಂದು ಚಾಸಾ-1 ರವರೇ ಆರೋಪಿಗಳ ಜೊತೆಯಲ್ಲಿ ಜಗಳವನ್ನು ತೆಗೆದು ಅವರ ಮೇಲೆ ಹಲ್ಲೆಯನ್ನು ಮಾಡಿ 2 ನೇ ಆರೋಪಿಯ ಬಟ್ಟೆಯನ್ನು ಹರಿದು ಹಾಕಿದರು ಮತ್ತು ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಊರಿನಲ್ಲಿ ಪಂಚಾಯಿತಿಯನ್ನು ಮಾಡಿ ತೀರ್ಮಾನವೂ ಸಹ ಆಗಿದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಚಾಸಾ-3 ರವರು ನಿಮ್ಮ ತಂದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಚಾಸಾ-1 ರವರು ನಿಮಗೆ ಹೇಳಿದ ಹಾಗೆ ನೀವು ಇಂದು ನ್ಯಾಯಾಲಯದಲ್ಲಿ ಸಾಕ್ಷಿ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯ ಹೌದು ಎನ್ನುತ್ತಾರೆ. ಚಾಸಾ-1 ರವರೇ ಆರೋಪಿಗಳ ಮೇಲೆ ಹಲ್ಲೆಯನ್ನು ಮಾಡಿ ಸುಳ್ಳು ದೂರನ್ನು ನೀಡಿರುತ್ತಾರೆ ಎಂದರೆ ಸಾಕ್ಷಿಯು ಆರೋಪಿಗಳು ಮತ್ತು ಚಾಸಾ-1 ರವರು ಇಬ್ಬರೂ ಸಹ ಗಲಾಟೆಯನ್ನು ಮಾಡಿದ್ದಾರೆ ಎನ್ನುತ್ತಾರೆ.

ನಿಮಗೆ ನಿಪಿ-1 ರಲ್ಲಿ ಇರುವ ವಿಷಯದ ಬಗ್ಗೆ ಮಾಹಿತಿ ಇರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಪೋಲೀಸರ ಕೋರಿಕೆಯ ಮೇರೆಗೆ ನೀವು ನಿಮ್ಮ ಸಹಿಯನ್ನು ನಿಪಿ-2 ಕ್ಕೆ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನೀವು ಪೋಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ ಎಂದರೆ

ಸಾಕ್ಷಿಯು ಹೌದು ಎನ್ನುತ್ತಾರೆ. 1 ನೇ ಆರೋಪಿಯು ನಿಮ್ಮ ಮೇಲೆ ಹಲ್ಲೆ ಮಾಡಿರುವುದಿಲ್ಲ ಮತ್ತು ನಿಮ್ಮ ಬಟ್ಟೆಯನ್ನು ಸಹ ಹರಿದಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಪೋಲೀಸರು ಕೃತ್ಯನಡೆದ ಸ್ಥಳಕ್ಕೆ ಬಂದಿಲ್ಲ, ಪಂಚನಾಮೆಯನ್ನು ಮಾಡಿಲ್ಲ ಮತ್ತು ಮುದ್ದೆ ಮಾಲು-1 ನ್ನು ವಶಪಡಿಸಿಕೊಂಡಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

**ಮರು ವಿಚಾರಣೆ ಃ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**